## ಕರ್ನಾಟಕ ಸರ್ಕಾರ

## ಶಾಲಾ ಶಿಕ್ಷಣ ಇಲಾಖೆ (ಪದವಿ ಪೂರ್ವ)

**ತರಗತಿ : ಪ್ರಥಮ ಪಿಯುಸಿ** **ವಿಷಯ : ಐಚ್ಛಿಕ ಕನ್ನಡ (16)**

# ಮಾದರಿ ಪ್ರಶ್ನೆಪತ್ರಿಕೆಯ ನೀಲನಕ್ಷೆ – 2024-25

| ಕ್ರ.ಸಂ | ಪಠ್ಯಗಳು | ಬೋಧನಾ ಅವಧಿ | ನಿಗದಿಪಡಿಸಿದ ಅಂಕಗಳು | ಸ್ಮರಿಸು | | | | | ಗ್ರಹಿಸು | | | | ಅನ್ವಯಿಸು | | | | ವಿಶ್ಲೇಷಣೆ/ ಮೌಲ್ಯಮಾಪನ/ ಸೃಜನಾತ್ಮಕ | | | |
|---|---|---|---|---|---|---|---|---|---|---|---|---|---|---|---|---|---|---|---|---|
| | | | | 1 | 2 | 3 | 4 | 5 | 1 | 2 | 3 | 4 | 1 | 2 | 3 | 4 | 1 | 2 | 3 | 4 |
| 01 | ವಚನ | 13 | 13 | | 01 | | | | | | 01 | | | | | 02 | | | | |
| 02 | ಕೀರ್ತನೆ | 09 | 09 | | 01 | | | | | | 01 | | | | | | | | | 01 |
| 03 | ಜಾನಪದ ಮತ್ತು ತತ್ವಪದ | 09 | 09 | | 01 | | | | | | 01 | | | | | 01 | | | | |
| 04 | ಹೊಸಗನ್ನಡ ಕಾವ್ಯ | 22 | 22 | 04 | 03 | | | | | | 01 | | | | | 01 | 01 | | | 01 |
| 05 | ಗದ್ಯ | 38 | 38 | 05 | 03 | | | | | | 02 | | | | | 03 | | 01 | 01 | 01 |
| 06 | ಕನ್ನಡ ಭಾಷೆ ಮತ್ತು ಸಾಹಿತ್ಯ | 14 | 14 | | 02 | | | | | | | | | | | 01 | | 01 | | 01 |
| 07 | ಭಾಷಾಭ್ಯಾಸ | 10 | 10 | 05 | | | | 01 | | | | | | | | | | | | |
| 08 | ರಚನೆ | 05 | 05 | | | | | | 05 | | | | | | | | | | | |
| ಒಟ್ಟು ಪ್ರಶ್ನೆಗಳು | | 120 | 120 | 14 | 11 | | | 01 | 05 | | 06 | | | | | 08 | 01 | 02 | 01 | 04 |
| ಒಟ್ಟು ಅಂಕಗಳು | | | | 14 | 22 | | | 05 | 05 | | 18 | | | | | 32 | 01 | 04 | 03 | 16 |
| ಉತ್ತರಿಸಬೇಕಾದ ಅಂಕಗಳು | | | | 14 | 12 | | | 05 | 05 | | 12 | | | | | 12 | 01 | 04 | 03 | 12 |
| ಹೆಚ್ಚುವರಿ ಅಂಕಗಳು | | | | - | 10 | | | - | - | | 06 | | | | | 20 | - | - | - | 04 |

| | |
|---|---|
| ಒಟ್ಟು ಪ್ರಶ್ನೆಗಳು | 53 |
| ಉತ್ತರಿಸಬೇಕಾದ ಪ್ರಶ್ನೆಗಳು | 40 |
| ಹೆಚ್ಚುವರಿ ಪ್ರಶ್ನೆಗಳು | 13 |
| ಒಟ್ಟು ಅಂಕಗಳು | 120 |
| ಉತ್ತರಿಸಬೇಕಾದ ಅಂಕಗಳು | 80 |
| ಹೆಚ್ಚುವರಿ ಅಂಕಗಳು | 40 |

**ಕರ್ನಾಟಕ ಸರ್ಕಾರ**

**ಶಾಲಾ ಶಿಕ್ಷಣ ಇಲಾಖೆ (ಪದವಿ ಪೂರ್ವ)**

**ಮಾದರಿ ಪ್ರಶ್ನೆ ಪತ್ರಿಕೆ**

| | |
|---|---|
| **ತರಗತಿ : ಪ್ರಥಮ ಪಿಯುಸಿ** | **ಶೈಕ್ಷಣಿಕ ವರ್ಷ : 2024-25** |
| **ವಿಷಯ : ಐಚ್ಛಿಕ ಕನ್ನಡ (16)** | **ಒಟ್ಟು ಅಂಕಗಳು : 80** |
| **ಸಮಯ : 3 ಗಂಟೆ** | **ಒಟ್ಟು ಪ್ರಶ್ನೆಗಳು : 53** |

**ಸೂಚನೆ : 'ಅ' ವಿಭಾಗ ದಲ್ಲಿನ ಪ್ರಶ್ನೆಗಳಿಗೆ ಪ್ರಥಮವಾಗಿ ಬರೆದ ಉತ್ತರಗಳನ್ನು ಮಾತ್ರ ಮೌಲ್ಯಮಾಪನದಲ್ಲಿ ಪರಿಗಣಿಸಲಾಗುವುದು.**

**ಅ-ವಿಭಾಗ**

**I. ಸರಿಯಾದ ಉತ್ತರವನ್ನು ಆಯ್ಕೆಮಾಡಿ ಬರೆಯಿರಿ.** **1X5 = 5**

1. ನಾವು ಇವರ ದೇಟಿನ ಕಾಯಿಗಳು
   ಅ) ಮರದ    ಆ) ದೇವರ
   ಇ) ಅಸುರರ    ಈ) ಪ್ರೀತಿಯ

2. 'ಪಂಪಸಾಗರ ಬಸವಸಾಗರ ಕಾರಂಜಾ ತೆರೆಗಳಲ್ಲಿ
   ಹೊಸತು ಕಾವ್ಯವ ಬರೆಯಬೇಕಿದೆ ಬದುಕು ಬಣ್ಣವೇರಲಿಕೆ'
   – ಈ ಸಾಲುಗಳಲ್ಲಿ ಬದುಕು ಬಣ್ಣವೇರಲಿಕೆ ಮಾಡಬೇಕಿರುವುದು
   ಅ) ಕಾವ್ಯ ಪರಂಪರೆಯನ್ನು ಓದಬೇಕು
   ಆ) ಪಂಪ ಬಸವರನ್ನು ಅನುಸರಿಸಬೇಕು
   ಇ) ಹೊಸ ಸಂವೇದನೆಯ ಕಾವ್ಯ ರಚನೆ ಮಾಡಬೇಕು
   ಈ) ಕಾರಂಜಾ ತೆರೆಗಳಲ್ಲಿ ಹೊಸತನದಿಂದ ತೇಲಬೇಕು

3. ಇದು ಎದೆಯನ್ನು ತಟ್ಟುವುದಿಲ್ಲ
   ಅ) ಪ್ರೀತಿ ಇಲ್ಲದ ನಡತೆ    ಆ) ಸತ್ಯವಿಲ್ಲದ ನಡತೆ
   ಇ) ಧೈರ್ಯವಿಲ್ಲದ ನಡತೆ    ಈ) ಪ್ರಾಮಾಣಿಕತೆ ಇಲ್ಲದ ನಡತೆ

4. ಚಪ್ಪಲಿಯನ್ನು ತಲೆಮೇಲೆ ಹೊತ್ತವರು
   ಅ) ಶ್ರಮಿಕರು    ಆ) ಮೋಚಿ
   ಇ) ಶತ್ರುಘ್ನ    ಈ) ಭರತ

5. ಇವರ ಕೈ, ಕಣ್ಣು, ಮನಸ್ಸು ಮಲ್ಲಿಗೆಯಾಗಲಿ
   ಅ) ಗುಡಿಸಲುಗಳಿಗೆ ಬೆಂಕಿ ಇಟ್ಟವರು    ಆ) ಹೂ ಕಟ್ಟಿದವರು
   ಇ) ತ್ಯಾಗ ಮಾಡಿದವರು    ಈ) ಕಾಗದದ ದೋಣಿ ಬಿಟ್ಟವರು

**II. ಸರಿಯಾದ ಉತ್ತರವನ್ನು ಆಯ್ದು ಖಾಲಿಜಾಗ ಭರ್ತಿಮಾಡಿ** **1X5= 5**

6. 'ಹತ' ಪದದ ಅರ್ಥ ___________
7. 'ಕುದುರೆ' ಪದದ ಸಮಾನಾರ್ಥ ಪದಗಳು ___________
8. 'ಮಣಿ' ಪದದ ನಾನಾರ್ಥ ಪದಗಳು ___________
9. 'ಸಂಜೆ' ಪದದ ತತ್ಸಮ ರೂಪ ___________
10. 'ನರರಲ್ಲೇಕೆ' ಪದದ ಬಿಡಿಸಿ ಬರೆದ ರೂಪ ___________

**(ಸೋಲು-ರತ್ನ, ಕೊಲೆ, ಸಂಧ್ಯಾ, ಹಿತ, ಹಯ-ಅಶ್ವ, ನರರಲ್ಲಿ+ಏಕೆ)**

## III. ಸರಿಯಾದ ಉತ್ತರವನ್ನು ಆಯ್ದು ಹೊಂದಿಸಿ ಬರೆಯಿರಿ 1X5= 5

11. ಅ) ಸುಲಭ - ಬುದ್ಧಿವಾದ
    ಆ) ಮುಕ್ತಿ - ಆನೆ
    ಇ) ಕಿವಿಮಾತು - ಗ್ರಾಮ- ಊರು
    ಈ) ಕರಿ - ಪಿಸುಮಾತು
    ಉ) ಹಳ್ಳಿ - ಕಠಿಣ
    - ಮುಕುತಿ

## IV. ಕೆಳಗಿನ ಪ್ರಶ್ನೆಗಳಿಗೆ ಒಂದು ವಾಕ್ಯದಲ್ಲಿ ಉತ್ತರಿಸಿ 1X 5= 5

12. ಭಯಗೊಂಡ ಬ್ರಾಹ್ಮಣನು ಕಡೆಗೆ ಏನು ಮಾಡಿದನು?
13. ಯಾವುದು ಜನರ ದೃಷ್ಟಿಯಲ್ಲಿ ಸ್ವಾಗತಾರ್ಹ ವಿಶೇಷವಾಗಿದೆ?
14. ನೆಟ್ಕಲ್ಲು ಸ್ಕೂಲಿಗೆ ಹೇಗೆ ಸೇರಿಕೊಂಡನು?
15. ತಿರುಮಲಾಂಬ ಅವರು ನಡೆಸುತ್ತಿದ್ದ ಪ್ರಕಟಣಾ ಮಾಲೆಗಳಾವುವು?
16. 'ದೋಸೆ ಯಜಮಾನ್ರು' ಎಂದು ಯಾರನ್ನು ಕರೆಯುತ್ತಿದ್ದರು?

### ಆ- ವಿಭಾಗ

## V. ಕೆಳಗಿನ ಪ್ರಶ್ನೆಗಳಲ್ಲಿ ನಾಲ್ಕಕ್ಕೆ ಎರಡು-ಮೂರು ವಾಕ್ಯಗಳಲ್ಲಿ ಉತ್ತರಿಸಿ 2X4 = 8

17. ಗಾಳಿ ಬೀಸಿದತ್ತ ಹುಟ್ಟು ಹಾಕಿದರೆ ಏನಾಗುತ್ತದೆ?
18. ಸಂಸಾರದಲ್ಲಿ ಮನಸ್ಸು ನೆಲೆಯಾಗಿರಬೇಕಾದ ಬಗೆ ಹೇಗೆ?
19. ಭಗವಂತನ ಅನುಗ್ರಹಕ್ಕೆ ಪಾತ್ರನಾಗುವಲ್ಲಿ ನಡೆನುಡಿಗಳು ಹೇಗಿರಬೇಕು?
20. ಮಾವಿನ ಕಾಯಿಗಳಲ್ಲಿರುವ ಬೇಧ ಯಾವುವು?
21. ತುತ್ತೂರಿ ತಮಟೆಗಳ ಧ್ವನಿ ಯಾವಾಗ ಇರುವುದಿಲ್ಲ?
22. ಹೊಸ ಚರಿತ್ರೆ ರಚಿಸಲು ಯಾವ ಅಂಶಗಳು ಬೇಕು?

## VI. ಕೆಳಗಿನ ಮೂರು ಹೇಳಿಕೆಗಳಿಗೆ ಸಂದರ್ಭ ಸೂಚಿಸಿ ಸ್ವಾರಸ್ಯ ಬರೆಯಿರಿ 3X3 = 9

23. 'ನಾದಪ್ರಿಯನೂ ಅಲ್ಲ, ವೇದಪ್ರಿಯನೂ ಅಲ್ಲ'
24. 'ವೇಷಧಾರಿಗಳಿಗೆ ಕಾಶಿಯಾತ್ರೆ ಫಲವು ಬಾಹೋದೆ'
25. 'ಬಂಗಾರ ನಿನಗೆ ಸ್ಥಿರವಲ್ಲ'
26. 'ಸಾಮ್ರಾಜ್ಯವಾವಗಂ ಸುಲಿಗೆ ರೈತರಿಗೆ'

## VII. ಕೆಳಗಿನ ಎರಡು ಪ್ರಶ್ನೆಗಳಿಗೆ ವಿವರವಾಗಿ ಉತ್ತರಿಸಿ 4X2 = 8

27. ಮಾದಾರ ಚೆನ್ನಯ್ಯ ಪ್ರಶ್ನಿಸಿರುವ ಮುಕ್ತಿಯ ಮಾರ್ಗಗಳಾವುವು?
28. ಆಚರಣೆಗಿಂತ ಭಕ್ತಿ-ಭಾವ ಮುಖ್ಯ ಎಂಬುದು ಅಕ್ಕನ ವಚನದಲ್ಲಿ ಹೇಗೆ ವ್ಯಕ್ತವಾಗಿದೆ?
29. ಒಕ್ಕಲಿಗರು ಎದುರಿಸಿದ ಬರಗಾಲದ ಭೀಕರ ಪರಿಸ್ಥಿತಿಯನ್ನು ವಿವರಿಸಿ.
30. ತಾಯಿ ಮಗಳ ಅಂತಃಕರಣ 'ರೈಲ್ವೆ ನಿಲ್ದಾಣದಲ್ಲಿ' ಕವಿತೆಯಲ್ಲಿ ಹೇಗೆ ಅನಾವರಣಗೊಂಡಿದೆ?

**VIII. ಕೆಳಗಿನ ಯಾವುದಾದರೂ ಒಂದು ಪದ್ಯದ ಭಾವಾರ್ಥವನ್ನು ವಿವರಿಸಿ** **4X1 = 4**

31. ದೊರೆತನವು ಬಂದಾಗ ಕೆಟ್ಟುದ ನುಡಿಯಬೇಡ
ಸಿರಿ ಬಂದ ಕಾಲಕ್ಕೆ ಬಲು ಮೆರೆಯಬೇಡ
ಸಿರಿವಂತ ಶ್ರೀ ಕಾಗಿನೆಲೆಯಾದಿಕೇಶವನ
ಚರಣ ಕಮಲವ ಸೇರಿ ಸುಖಿಯಾಗು ಮನುಜ.

32. ಪಡುವ ದಿಕ್ಕಿನಿಂದ ಹರಿವ
ಗಾಳಿ ಕುದುರೆಯನ್ನು ಏರಿ
ಪರ್ಜನ್ಯ ಗೀತವನ್ನು
ಹಾಡುತ್ತ ಬಂದಿತು.

**ಇ-ವಿಭಾಗ**

**IX. ಕೆಳಗಿನ ಪ್ರಶ್ನೆಗಳಲ್ಲಿ ಎರಡಕ್ಕೆ ಎರಡು-ಮೂರು ವಾಕ್ಯಗಳಲ್ಲಿ ಉತ್ತರಿಸಿ** **2X2 = 4**

33. ಭ್ರಮೆ ಮೂಡಿದೊಡನೆ ಬ್ರಾಹ್ಮಣನು ಏನು ಮಾಡಿದನು?
34. ರೋಮ್ ನಗರವನ್ನು ಕುರಿತ ಎರಡು ಹಳೆಯ ಗಾದೆಗಳು ಯಾವುವು?
35. ಗಾಂಧಿ ಟೋಪಿಯ ಬಗ್ಗೆ ಲೇಖಕರ ತಂದೆಯವರಿಗೆ ಯಾವ ಭಾವನೆಯಿತ್ತು?
36. ಮುದುಕಿಯನ್ನು ಕುಬುಸ ಆಕರ್ಷಿಸಬೇಕೆಂದು ವಡವಟ್ ದಂಪತಿಗಳು ಏನು ಮಾಡಿದರು?

**X. ಕೆಳಗಿನವುಗಳಲ್ಲಿ ಎರಡು ಹೇಳಿಕೆಗಳಿಗೆ ಸಂದರ್ಭ ಸೂಚಿಸಿ ಸ್ವಾರಸ್ಯ ಬರೆಯಿರಿ** **3X2 = 6**

37. 'ಇದು ಆಧುನಿಕ ಇಟಲಿಯಲ್ಲ; ಇಂದಿಗೂ ಪ್ರಾಚೀನ ರೋಮ್'
38. 'ಆಕೆ ಮಾಲಾಸಿನ್ನಾಳಂತೆ ಕಾಣುತ್ತಾಳೆ'
39. 'ಯಾವ ಕೇಡಿಗಂತ ನಮ್ ನೆಟ್ಕಲ್ಲು ಇಸ್ಕೂಲಿಗೋತಿನಿ ಅಂತತೆ'

**XI. ಕೆಳಗಿನ ಎರಡು ಪ್ರಶ್ನೆಗಳಿಗೆ ವಿವರವಾಗಿ ಉತ್ತರಿಸಿ** **4X2 = 8**

40. ಧೂರ್ತರು ವಂಚನೆಗೆ ಬಳಸಿದ ಉಪಾಯ ಮತ್ತು ಅದರ ಪರಿಣಾಮವನ್ನು ಕುರಿತು ಬರೆಯಿರಿ.
41. ಮನೋ-ಸಾಮಾಜಿಕ-ಸಾಂಸ್ಕೃತಿಕ ವಿಶೇಷವನ್ನು ಪರಿಚಯಿಸಲು ಲೇಖಕರು ನೀಡುವ ಮೂರು ವಿವರಣೆಗಳಾವುವು? ಸಂಕ್ಷಿಪ್ತವಾಗಿ ವಿವರಿಸಿ.
42. ತಿರುಮಲಾಂಬ ರವರು ಕುಟುಂಬ ಮತ್ತು ಸಾಹಿತ್ಯ ಕ್ಷೇತ್ರದಲ್ಲಿ ನಿರ್ವಹಿಸಿದ ಜವಾಬ್ದಾರಿ ಮತ್ತು ಪಾತ್ರಗಳೇನು?
43. ಮಾಚಮ್ಮನ ದೋಸೆ ಕೌಶಲವನ್ನು ಲೇಖಕಿ ಹೇಗೆ ವಿವರಿಸಿದ್ದಾರೆ?

**ಈ-ವಿಭಾಗ**

**(ಭಾಷೆ, ಸಾಹಿತ್ಯ, ಸ್ವರೂಪ)**

**XII. ಕೆಳಗಿನವುಗಳಲ್ಲಿ ಎರಡು ಪ್ರಶ್ನೆಗಳಿಗೆ ಎರಡು-ಮೂರು ವಾಕ್ಯಗಳಲ್ಲಿ ಉತ್ತರಿಸಿ** **2X2 = 4**

44. ಮಾತೆಂಬ ಜ್ಯೋತಿ ಬೆಳಗದಿದ್ದರೆ ಏನಾಗುತ್ತಿತ್ತು?
45. ಸಾಹಿತ್ಯ ರಚನೆಗೆ ಪ್ರೇರಣೆ ಯಾವುದು?
46. ಹತ್ತನೇ ಶತಮಾನವನ್ನು 'ಪಂಪಯುಗ' ಎಂದು ಕರೆಯಲು ಕಾರಣವೇನು?

**XIII. ಕೆಳಗಿನವುಗಳಲ್ಲಿ ಒಂದು ಪ್ರಶ್ನೆಗೆ ವಿವರವಾಗಿ ಉತ್ತರಿಸಿ** **4X1 = 4**

47. ಕನ್ನಡ ಭಾಷೆಯ ಪ್ರಾಚೀನತೆಯನ್ನು ಕುರಿತು ಬರೆಯಿರಿ.

48. ವಚನ ಸಾಹಿತ್ಯದ ವಿಶಿಷ್ಟತೆಯನ್ನು ವಿವರಿಸಿ.

## ಉ-ವಿಭಾಗ

## (ರಚನೆ)

**XIV. ಕೆಳಗಿನ ಪಠ್ಯಭಾಗವನ್ನು ಗಮನಿಸಿ ಕೊಟ್ಟಿರುವ ಪ್ರಶ್ನೆಗಳಿಗೆ ಉತ್ತರಿಸಿ** **1X5 = 5**

ಪಠ್ಯಭಾಗ :

ಆದಿಪುರಾಣ ಪಂಪನ ಮೊದಲನೆಯ ಕಾವ್ಯಕೃತಿ. ಎಲ್ಲ ಪುರಾಣ ಲಕ್ಷಣಗಳನ್ನು ಒಳಗೊಂಡ ಒಂದು ಪುರಾಣ. ಧರ್ಮ ಮತ್ತು ಕಾವ್ಯಧರ್ಮ ಇವೆರಡನ್ನು ಪ್ರತಿಪಾದಿಸುವ ಗ್ರಂಥ. ಆದಿ ತೀರ್ಥಂಕರನಾದ ಪುರುದೇವನೇ ಈ ಕಾವ್ಯದ ಕಥಾನಾಯಕ. ಆದಿಪುರಾಣದಲ್ಲಿ ಎರಡು ಸನ್ನಿವೇಶಗಳು ಕಾವ್ಯ ತೋರಿಸುವ ಮಹತ್ವದ ಸತ್ಯಕ್ಕೆ ಉದಾಹರಣೆಗಳಾಗಿವೆ. ಇವುಗಳಲ್ಲಿ ಮೊದಲನೆಯದು ನೀಳಾಂಜನೆಯ ನೃತ್ಯದ ಸನ್ನಿವೇಶ. ಪುರುದೇವನ ಪರಿನಿಷ್ಕ್ರಮಣದ ಸೂಚನೆಯನ್ನು ಅರಿತು ಇಂದ್ರ ಪುರುದೇವನ ಸಭೆಯಲ್ಲಿ ನೀಳಾಂಜನೆಯ ನೃತ್ಯವನ್ನು ಆಯೋಜಿಸುತ್ತಾನೆ. ನೀಳಾಂಜನೆ ಅಸಾಧಾರಣ ನರ್ತಕಿ. ಇಲ್ಲಿ ಬಹಳ ಅರ್ಥಪೂರ್ಣವಾದ ಸಂಗತಿಯೆಂದರೆ ನೃತ್ಯ ಸನ್ನಿವೇಶ ಮೂಲಕ ಪುರುದೇವನಿಗೆ ವೈರಾಗ್ಯ ಹುಟ್ಟುವುದು. ಇಂದ್ರ ನೀಳಾಂಜನೆ ಸತ್ತರೂ ಇನ್ನೊಂದು ಪಾತ್ರವನ್ನ ಸೃಷ್ಟಿಸುತ್ತಾನೆ. ಸಭಿಕರಿಗೆ ಈ ಪಾತ್ರಾಂತರದ ಜೋಡಣೆ ಗೊತ್ತಾಗುವುದಿಲ್ಲ. ಆದರೆ ಪುರುದೇವ ವಿದ್ಯಾನಿಲಯನಾದ್ದರಿಂದ ಅವನಿಗೆ ಗೊತ್ತಾಯಿತು. ಅತಿಶಯ ಭೋಗದಲ್ಲಿ ವಿರಕ್ತಿ ಹುಟ್ಟುವಂತೆ ರಸಾಧಿಕ್ಯದಲ್ಲಿ ವಿರಸ ಹುಟ್ಟಿಕೊಳ್ಳುತ್ತದೆ. ರಸ ಮತ್ತು ರಸಭಂಗಗಳ ಕ್ರಮದಲ್ಲಿ ಜೀವನ ನಶ್ವರತೆ ಮಿಂಚಿನಂತೆ ದೃಷ್ಯಮಾನವಾಗುತ್ತದೆ.

ಪ್ರಶ್ನೆಗಳು :

49. ಆದಿಪುರಾಣ ಏನನ್ನು ಪ್ರತಿಪಾದಿಸುತ್ತದೆ?

50. ಆದಿಪುರಾಣದ ನಾಯಕ ಯಾರು?

51. ನೀಳಾಂಜನೆಯ ನೃತ್ಯದ ಸನ್ನಿವೇಶ ಯಾವುದಕ್ಕೆ ಉದಾಹರಣೆಯಾಗಿದೆ?

52. ನೀಳಾಂಜನೆ ಸತ್ತಾಗ ಇಂದ್ರ ಏನು ಮಾಡುತ್ತಾನೆ?

53. ಪಾತ್ರಾಂತರದ ಜೋಡಣೆ ಪುರುದೇವನಿಗೆ ಗೊತ್ತಾಗಲು ಕಾರಣವೇನು?

*-*-*-*-*